## ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 565 |
| 2. | ಸದಸ್ಯರ ಹೆಸರು | : | ಶ್ರೀ ಆಯನೂರು ಮಂಜುನಾಥ್ |
| 3. | ಉತ್ತರಿಸಬೇಕಾದ ದಿನಾಂಕ | : | 13.12.2018 |
| 4. | ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಶಿವಮೊಗ್ಗ ವಿಮಾನ ನಿಲ್ದಾಣವನ್ನು ಸರ್ಕಾರ ಯಾವಾಗ ಪೂರ್ಣಗೊಳಿಸುತ್ತದೆ; ಇಲ್ಲಿಯವರೆಗೆ ಬಿಡುಗಡೆ ಮಾಡಿದ ಅನುದಾನವೆಷ್ಟು; ವೆಚ್ಚವೆಷ್ಟು; ಬಾಕಿ ಉಳಿದಿರುವ ಕಾಮಗಾರಿಗಳ ವಿವರ ಒದಗಿಸುವುದು;</td><td>ಶಿವಮೊಗ್ಗ ವಿಮಾನ ನಿಲ್ದಾಣವನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ (PPP) ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದ್ದು, ಸದರಿ ಯೋಜನೆಯ ಭೂಸ್ವಾಧೀನಕ್ಕಾಗಿ ರೂ.2596.00 ಲಕ್ಷಗಳ ಅನುದಾನವನ್ನು ಸರ್ಕಾರದಿಂದ ಬಿಡುಗಡೆಗೊಳಿಸಲಾಗಿದೆ.</td></tr>
<tr><td>ಆ)</td><td>ಶಿವಮೊಗ್ಗ ವಿಮಾನ ನಿಲ್ದಾಣದ ಕಾರ್ಯಾರಂಭ ಮಾಡದಿರಲು ಕಾರಣವೇನು; ಗುತ್ತಿಗೆದಾರರು ಯಾರು; ಯಾವ ಯಾವ ಕಾಮಗಾರಿಗಳು ಯಾವ ಯಾವ ಹಂತದಲ್ಲಿವೆ;</td><td rowspan="3">ಶಿವಮೊಗ್ಗ ವಿಮಾನ ನಿಲ್ದಾಣವನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲು ದಿನಾಂಕ 23/03/2007ರಲ್ಲಿ ಮಂಜೂರಾತಿ ನೀಡಿ ಸದರಿ ಯೋಜನೆಗೆ ಶಿವಮೊಗ್ಗ ಏರ್‌ಪೋರ್ಟ್ ಡೆವಲಪರ್ಸ್ ಪ್ರೈವೇಟ್.ಲಿಮಿಟೆಡ್, (M/s. Shimoga Airport Developers Private Limited) ಇವರೊಂದಿಗೆ ದಿನಾಂಕ 21.12.2010 ರಂದು ಪೂರಕ ಅಭಿವೃದ್ಧಿ ಒಪ್ಪಂದವನ್ನು ಮಾಡಿಕೊಳ್ಳಲಾಗಿತ್ತು. ಒಪ್ಪಂದದ ಪ್ರಕಾರ 24 ತಿಂಗಳ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದ ಕಾರಣ ದಿನಾಂಕ:21.01.2015 ರಂದು ಯೋಜನಾ ಒಪ್ಪಂದವನ್ನು ರದ್ದುಪಡಿಸಲಾಗಿರುತ್ತದೆ.<br><br>ಒಪ್ಪಂದವನ್ನು ರದ್ದುಪಡಿಸಿದ ಅವಧಿಯವರೆಗೆ ಅಭಿವರ್ಧಕರಿಂದ ಸಾಧಿಸಲಾಗಿರುವ ಪ್ರಗತಿಯು ಈ ಕೆಳಗಿನಂತಿವೆ.<br><br>• 1.5 ಕಿ.ಮೀ ಜಮೀನನ್ನು ಮಟ್ಟ ಮಾಡಿ ಸಮತಟ್ಟುಗೊಳಿಸಲಾಗಿದೆ(ರನ್-ವೇಗಾಗಿ).<br>• 300 ಮೀಟರ್‌ಗಳ ಕಾಂಪೌಂಡ್ ಗೋಡೆಯನ್ನು ನಿರ್ಮಿಸಲಾಗಿರುತ್ತದೆ.</td></tr>
<tr><td>ಇ)</td><td>ವಿಮಾನ ನಿಲ್ದಾಣವನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು)</td></tr>
<tr><td>ಈ)</td><td>ಈ ವಿಮಾನ ನಿಲ್ದಾಣವನ್ನು ಎಂದಿನಿಂದ ಆರಂಭಿಸಲಾಗುವುದು; (ಪೂರ್ಣ ವಿವರ ಒದಗಿಸುವುದು)</td></tr>
</table>

| | | |
|---|---|---|
| | | ಯೋಜನಾ ಒಪ್ಪಂದವನ್ನು ರದ್ದುಪಡಿಸಲಾಗಿದ್ದರಿಂದ, ನೋ-ಫ್ರಿಲ್(ಸಣ್ಣ ಸಾಮರ್ಥ್ಯದ) ವಿಮಾನ ನಿಲ್ದಾಣದ ಮಾದರಿಯಲ್ಲಿ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಲು ಟೆಂಡರ್ ಆಹ್ವಾನಿಸಿ, ಅಭಿವರ್ಧಕರನ್ನು ಆಯ್ಕೆ ಮಾಡಿದ ನಂತರ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಮೂಅಇ 94 ರಾಅವಿ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ